# ಶ್ರೀಮಾತೆಯವರ ನೆನಪುಗಳು

ಬಂಗಾಳಿ ಮೂಲ : **ಯೋಗೀಂದ್ರಮೋಹಿನಿ ವಿಶ್ವಾಸ್ (ಯೋಗಿನ್ ಮಾ)**     ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



ಆಗ ಶ್ರೀಮಾತೆಯವರು ದಕ್ಷಿಣೇಶ್ವರದ ನಹಬತ್‌ನಲ್ಲಿ ಸೀತಾದೇವಿಯಂತೆ ವಾಸಿಸುತ್ತಿದ್ದರು. ಉಡುವುದಕ್ಕೆ ಕೈಮಗ್ಗದ, ಅಗಲವಾದ ಕೆಂಪು ಅಂಚಿನ ಸೀರೆ. ಬೈತಲೆಯಲ್ಲಿ ಸಿಂದೂರ. ಕಪ್ಪನೆಯ ತಲೆಗೂದಲು ಹೆಚ್ಚುಕಡಿಮೆ ಕಾಲಿನವರೆಗೂ ಇಳಿಬಿಟ್ಟು ಸ್ಪರ್ಶಿಸುತ್ತಿದೆ. ಕೊರಳಲ್ಲಿ ಚಿನ್ನದ ಕಂಠೀಹಾರ. ಮೂಗಿನಲ್ಲಿ ದೊಡ್ಡ ಒಂದು ಮೂಗುತಿ. ಕಿವಿಯಲ್ಲಿ ಓಲೆ. ಕೈಯಲ್ಲಿ ಬಳೆ (ಈ ಬಳೆಯನ್ನೇ ಮಥುರಬಾಬು ಶ್ರೀರಾಮಕೃಷ್ಣರ ಮಧುರ ಭಾವದ ಸಾಧನೆಯ ಸಮಯದಲ್ಲಿ ಮಾಡಿಸಿಕೊಟ್ಟಿದ್ದನು). ಶ್ರೀಮಾತೆಯವರ ದರ್ಶನ ಮಾಡುವುದು, ಅವರ ಬಳಿ ಇರುವುದೆಂದರೆ ತುಂಬಾ ಆನಂದವುಂಟಾಗುತ್ತಿತ್ತು. ನನಗೆ ಜಡೆ ಹಾಕುವುದೆಂದರೆ ಅವರಿಗೆ ಬಹಳ ಖುಷಿ. ನಾನು ಅಲ್ಲಿಗೆ ಹೋದಾಗಲೆಲ್ಲ ಜಡೆ ಹಾಕುತ್ತಿದ್ದರು. ನನಗೂ ಅದರಿಂದ ತುಂಬ ಸಂತಸವುಂಟಾಗುತ್ತಿತ್ತು. ಒಂದು ದಿನ ಅವರು ನನಗೆ ಹೇಳಿದರು: ''ನೋಡು ಯೋಗಿನ್, ಅವರು ಜನರಿಗಾಗಿ ಅಷ್ಟೊಂದನ್ನು (ಸಮಾಧಿ, ಭಾವ ಇತ್ಯಾದಿಗಳನ್ನು) ನೀಡಿದ್ದಾರೆ, ನನಗಂತೂ ಏನೂ ಆಗಿಲ್ಲ. ನೀನು ಒಂದು ಸಲ ಅವರ ಬಳಿಗೆ ಹೋಗಿ ಹೇಳಿ ನೋಡು.'' ನಾನು ಹತಭಾಗ್ಯೆ, ನನಗೆ ಏನೂ ಅರ್ಥವಾಗಿರಲಿಲ್ಲ. ನಾನು ಠಾಕೂರರ ಬಳಿಗೆ ಹೋಗಿ ಹೇಳಿದೆ. ಅದಕ್ಕೆ ಅವರು ಏನೂ ಉತ್ತರಕೊಡಲಿಲ್ಲ. ಮರಳಿ ನಹಬತ್‌ಗೆ ಬಂದಾಗ ನೋಡಿದೆ, ಶ್ರೀಮಾತೆಯವರು ಪೂಜೆ ಮಾಡುತ್ತ ಸುಮ್ಮನೆ ನಗುತ್ತಿದ್ದಾರೆ, ಒಮ್ಮೊಮ್ಮೆ ಅಳುತ್ತಿದ್ದಾರೆ. ಬಾಹ್ಯಪ್ರಜ್ಞೆ ಇರಲಿಲ್ಲ. ಏನು ನಡೆಯುತ್ತಿದೆ ಎಂದು ನನಗರ್ಥವಾಯಿತು.

ಯಾರೋ ಒಬ್ಬರ ಮಾತಿಗೆ ಪ್ರತಿಯಾಗಿ ತಕ್ಷಣವೇ ಶ್ರೀರಾಮಕೃಷ್ಣರು ಶ್ರೀಮಾತೆಯವರ ಬಗ್ಗೆ ಹೇಳಿದ್ದರು: ''ನನ್ನದು ಖೇಟೇಶಾಕ್ ಸೊಪ್ಪಿನ (ಸೆಣಬಿನ ಸೊಪ್ಪಿನ ಕಟ್ಟು)[೧] ಕುಟುಂಬವೆ? ಆಕೆ ಸರಸ್ವತಿಯ ಅಂಶದಿಂದ ಹುಟ್ಟಿದ್ದಾಳೆ. ಅತ್ಯಂತ ಬುದ್ಧಿವಂತೆ. ಅದಕ್ಕೆ ಅಲಂಕಾರ ಇತ್ಯಾದಿ ಎಂದರೆ ಅವಳಿಗೆ ತುಂಬ ಇಷ್ಟ. ಅವಳು ಯಾರೆಂದರೆ – ನನ್ನ ಶಕ್ತಿ!'' ಅವರು ಲಾಟು ಮಹಾರಾಜರಿಗೆ ಹೇಳಿದ್ದರು: ''ನೋಡು, ಏನೇನು ವಸ್ತುಗಳನ್ನು ಕೊಂಡುಕೊಂಡು ತರುತ್ತಿಯೋ ಅವನ್ನೆಲ್ಲ ಅವಳಿಗೆ ತೋರಿಸು, ಹಾಗೂ ತಿಳಿಸು. ಇಲ್ಲದಿದ್ದರೆ ಅವರ (ಜನರ) ಉದ್ಧಾರ ಹೇಗಾದೀತು?''

೧೮೮೫ರ ಜ್ಯೇಷ್ಠ ಮಾಸದಲ್ಲಿ ಪಾನಿಹಾಟಿ ಉತ್ಸವ. ಠಾಕೂರರೊಂದಿಗೆ ಯಾರು ಯಾರು ಅಲ್ಲಿಗೆ ಹೋಗುವವರೋ (೧೦–೨೦ ಮಂದಿ) ಅವರಿಗೆಲ್ಲ ಅಡುಗೆ ಮಾಡಲು ಶ್ರೀರಾಮಕೃಷ್ಣರು ಯೋಗಿನ್–ಮಾಗೆ ಹೇಳಿದರು. ಗೋಲಾಪ್–ಮಾ ಅಡುಗೆ ಮಾಡಿದರು. ಹಲವರು ಭಕ್ತರು ತಡವಾಗಿ ಬಂದರು. ಅವರೆಲ್ಲ ಊಟಕ್ಕೆ ಕುಳಿತರು. ಅಷ್ಟರಲ್ಲಿ ೧೦–೧೨ ಮಂದಿ ಹೆಚ್ಚಾಗಿ ಬಂದು ಸೇರಿದರು. ಅಡುಗೆ ಕೆಲಸ ಮಾಡಿ ಮುಗಿಸುತ್ತಿದ್ದಂತೆಯೇ ಎಲ್ಲರೂ ಊಟ ಮಾಡಿ, ಮಾಡಿದ್ದೆಲ್ಲ ಮುಗಿದುಹೋಯಿತು. ಯೋಗಿನ್–ಮಾ ಮುಂತಾದವರಿಗೆ ಆಹಾರ ಏನೂ ಉಳಿಯಲಿಲ್ಲ. ಶ್ರೀಮಾತೆಯವರು ಅವರಿಗಾಗಿ ಅನ್ನ ಹಾಗೂ ಅದರೊಂದಿಗೆ ಒಂದೂವರೆಯಷ್ಟು ಅರ್ಧ ಬೆಂದಿದ್ದ ಬದನೆಕಾಯಿ, ಬಾಳೆಕಾಯಿ ಹಾಗೂ ಸುವರ್ಣಗಡ್ಡೆ ಇತ್ಯಾದಿಗಳನ್ನು ಬಳಸಿ ಒಂದು ಪಲ್ಯ ಮಾಡಿ ಬಡಿಸಿದರು. ಅಡುಗೆ ಈಗಲೂ ಬಾಯಲ್ಲಿ ನೀರು ಬರಿಸುವಂತಿದೆ – ಅಷ್ಟೊಂದು ರುಚಿಕರವಾಗಿತ್ತು. ✱

೧ ಬಂಗಾಳದಲ್ಲಿ ಸೆಣಬಿನ ಸೊಪ್ಪನ್ನು ಅಡುಗೆಗೆ ಬಳಸುತ್ತಾರೆ. ಇಲ್ಲಿ, ಶ್ರೀಮಾತೆ ಸಾಮಾನ್ಯ ಗೃಹಿಣಿಯಂತೆ ಅಡುಗೆ ಮನೆಗೆ ಮೀಸಲಾಗಿರುವ ಪತ್ನಿಯೆ? – ಎಂಬರ್ಥದಲ್ಲಿ ಹೇಳಲಾಗಿದೆ. *(– ಅನು)*